# ಅವಳೆಂದೂ ಅಳಲಿಲ್ಲ

ಕುಸುಮ ನನಗೆ ಚಿರಪರಿಚಿತಳು. ನಮ್ಮ ಮನೆ ದಾಟಿ ಪಕ್ಕದ ಅಡ್ಡರಸ್ತೆಯಲ್ಲಿ ತಿರುಗಿ, ಅಲ್ಲಿಂದ ಮುಂದೆ ಹೋದರೆ ಎಂಟನೆ ಅಡ್ಡರಸ್ತೆ ಸಿಗುತ್ತದೆ. ಅದೇ ರಸ್ತೆಯಲ್ಲಿ ಮುನ್ನೂರ ಹತ್ತನೇ ಮನೆ ಅವಳದು. ಅಂದರೆ ನಮ್ಮ ಹಿಂಭಾಗದ ರಸ್ತೆಯಲ್ಲಿದೆ ಅವಳ ಮನೆ ಎಂದ ಹಾಗಾಯಿತು. ಅದು ಬಾಡಿಗೆಗೆ ಹಿಡಿದ ಮನೆಯಾಗಿತ್ತು. ಕುಸುಮಾಳಿಗೆ ಗಂಡ ಇದ್ದ; ಸುರಸುಂದರಾಂಗನೇನು ಅಲ್ಲ. ಅವಳ ರೂಪಕ್ಕೆ ಅವನು ಹೇಳಿಸಿದವನೂ ಅಲ್ಲ. ಕುಸುಮಾ ಎಲ್ಲದರಲ್ಲೂ ಸರಿಯೇ ಸರಿ. ತುಂಬ ಜಾಣೆ. ಕೈಯಲ್ಲಿದ್ದಾಗ ಉದಾರಿಯೂ ಕೂಡ. ಅಂತಹವಳಿಗೆ ಅಂಥ ಗಂಡ ಸಿಗಬಾರದಿತ್ತು. ಅವನಿಗೊಂದು ದುಶ್ಚಟವೋ ಗೀಳೋ ತಿಳಿಯದು, ತಿಂಗಳಿಗೆ ಒಂದೋ ಎರಡೋ ಸಾರೆ ಹೇಳದೆ ಕೇಳದೆ ಮನೆ ಬಿಟ್ಟು ಪರಾರಿಯಾಗಿ ಬಿಡುತ್ತಿದ್ದ. ಎಲ್ಲಿಗೆ ಹೋದ ಯಾವಾಗ ಬರುತ್ತಾನೆ ಎನ್ನುವುದು ಅವನಿಗಲ್ಲದೆ ಬೇರೆಯವರಿಗೆ ಗೊತ್ತಾಗುತ್ತಿರಲಿಲ್ಲ. ಹೋದಂತೆ ಹಿಂತಿರುಗುತ್ತಿದ್ದ ತಿಳಿಗೇಡಿ ಅವನು. ಹೀಗೆ ಮಾಡುವುದರಿಂದ ಯಾರಿಗೆ ಕಷ್ಟ ಎಂದು ಯೋಚಿಸುತ್ತಿರಲಿಲ್ಲ. ಕುಸುಮಾ ತಲೆ ಕೆಡಿಸಿಕೊಳ್ಳಲು ಹೋಗುತ್ತಿರಲಿಲ್ಲ. ಹ್ಯಾಗೋ ಎಂತೋ ಮೂರು ಮಂದಿ ಇರುವ ಸಂಸಾರವನ್ನು ನಿಭಾಯಿಸುತ್ತಿದ್ದಳು. ಅವನು ಹಿಂತಿರುಗಿ ಬಂದಮೇಲೆ ಕೇಳಿದರೆ